
## ಗೋಥಿಕ್ ಶೈಲಿಯ ಪ್ರಾಗ್ ಮಹಲ್



ಗುಜರಾತ್‌ನ ಭುಜ್‌ನಗರದ ಪ್ರಾಗ್ ಮಹಲ್ ಅನ್ನು 1860ರಲ್ಲಿ ಕರ್ನಲ್ ಹೆನ್ರಿ ಸೇಂಟ್ ವಿಲ್ಕಿನ್ಸ್, ಇಟಾಲಿಯನ್ ಗೋಥಿಕ್ ಶೈಲಿಯಲ್ಲಿ ನಿರ್ಮಿಸಿದನು. ಇಡೀ ಅರಮನೆ ಇಟಾಲಿಯನ್ ಅಮೃತಶಿಲೆ ಮತ್ತು ಮರಳುಗಲ್ಲಿನಿಂದ ನಿರ್ಮಿಸಲಾಗಿದ್ದು, ಭಾರತೀಯ ಕುಶಲಕರ್ಮಿಗಳು ಮತ್ತು ವಿದೇಶಿ ಕಾರ್ಮಿಕರ ಜಂಟಿ ಕೊಡುಗೆಯಾಗಿ ನೆಲೆಗೊಂಡಿದೆ. ಭಾರತದ ಎರಡನೇ ಅತಿ ಎತ್ತರದ ಗಡಿಯಾರ ಗೋಪುರ ಇಲ್ಲಿನ ಮತ್ತೊಂದು ಆಕರ್ಷಣೆ. ಬಾಲಿವುಡ್‌ನ 'ಲಗಾನ್' ಸಿನಿಮಾದ ದೃಶ್ಯವೊಂದಕ್ಕೆ ಇಲ್ಲಿ ಚಿತ್ರೀಕರಣ ಮಾಡಲಾಗಿದೆ. ಈ ಅರಮನೆಯಲ್ಲಿನ ಅವಶೇಷ ಹಾಗೂ ರಾಜಮನೆತನದ ವೈಯಕ್ತಿಕ ಸಂಗ್ರಹವನ್ನು ಮಹಲಿನ ಒಂದು ಭಾಗದಲ್ಲಿರಿಸಿ, ಅದನ್ನು ವಸ್ತುಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ಶ್ರೇಷ್ಠ ಪ್ರತಿಮೆಗಳು ಮತ್ತು ಭವ್ಯ ದರ್ಬಾರ್ ಹಾಲ್ ಪ್ರಾಗ್ ಮಹಲ್‌ನ ಪ್ರಮುಖ ಅಂಶವಾಗಿವೆ. ಈ ಸಂಗ್ರಹಾಲಯದಲ್ಲಿರಿಸಿದ್ದ ನಿಲುವಂಗಿ, ಅದರ ಗುಂಡಿಗಳು, ಮಧ್ಯಕ್ಕೆ ಬೈತಲೆ, ಉದ್ದ ಕೂದಲಿನ ಆಕರ್ಷಕ, ವಿದೇಶೀ ವ್ಯಕ್ತಿಯೊಬ್ಬನ ಲೈಫ್ ಸೈಜ್ ಮರದ ಕೆತ್ತನೆ ಗಮನ ಸೆಳೆಯಿತು.

–ಎಸ್. ಪ್ರಭಾವತಿ, ಬೆಂಗಳೂರು

## ಹಳೆ ಕಾಲದ ಅಡಿಕೆ ಸುಣ್ಣದ ಪೆಟ್ಟಿಗೆ



ಮೇಲ್ನೋಟಕ್ಕೆ ಮಕ್ಕಳಾಟಿಕೆಯ ವಿಮಾನದಂತೆ ಈ ಚಿತ್ರದಲ್ಲಿ ಗೋಚರಿಸುವ ಪುಟ್ಟ ಕಲಾತ್ಮಕ ಮರದ ಪೆಟ್ಟಿಗೆಯು ತುಳುನಾಡಿನ ಗ್ರಾಮೀಣ ಭಾಗಗಳಲ್ಲಿ ಹಿಂದಿನ ಕಾಲದಲ್ಲಿ ಬಳಕೆಯಲ್ಲಿತ್ತು. ಐದಾರು ದಶಕಗಳ ಹಿಂದೆ ಊಟದ ಬಳಿಕ ಹಳ್ಳಿ ಮನೆಗಳಲ್ಲಿ ಎಲೆ, ಅಡಿಕೆ ಜಗಿಯುವ ಅಭ್ಯಾಸ ಪ್ರತಿ ಮನೆಯಲ್ಲಿತ್ತು. ಆಗ ತಕ್ಷಣದ ಉಪಯೋಗಕ್ಕೆ ಬರುವಂತೆ ಅಡಿಕೆ ಮತ್ತು ಸುಣ್ಣವನ್ನು ಇಂತಹ ಪೆಟ್ಟಿಗೆಗಳಲ್ಲಿ ಸಂಗ್ರಹಿಸಿಡಲಾಗುತ್ತಿತ್ತು.

ಇದು ಮೇಲಿನ ಭಾಗದ ಬಾಗಿಲಿನಿಂದ ಮುಚ್ಚಿದಾಗ ವಿಮಾನದಂತೆ ಕಾಣಿಸುತ್ತದೆ. ಹಿಂಭಾಗದಲ್ಲಿ ತಿರುಗಾಣಿಯಿಂದ ಜೋಡಿಸಿರುವ ಈ ಮುಚ್ಚಳವನ್ನು ಎಡಕ್ಕೂ ಬಲಕ್ಕೂ ಸರಿಸಬಹುದು. ಒಳ ಭಾಗದಲ್ಲಿ ಕೆತ್ತಲಾದ ಚೌಕಾಕಾರದ ಹಳ್ಳದಲ್ಲಿ ಅಡಿಕೆಯ ಚಿಕ್ಕ ತುಂಡುಗಳನ್ನೂ ಇನ್ನೊಂದು ವೃತ್ತಾಕಾರದ ತಗ್ಗಿನಲ್ಲಿ ಸುಣ್ಣವನ್ನೂ ಇಡಲಾಗುತ್ತಿತ್ತು. ಮುಂಬೈನ 'ಕಲಾಜಗತ್ತು' ಸಂಘಟನೆ ಕುರ್ಲಾದ ಬಂಟರ ಭವನದಲ್ಲಿ ಏರ್ಪಡಿಸಿದ ತುಳುನಾಡಿನ ಸಾಂಸ್ಕೃತಿಕ ವಸ್ತು ಪ್ರದರ್ಶನದಲ್ಲಿ ಇದು ಕಂಡಿತು.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ



## ತೆಂಗಿನ ಗೆರಟೆ ಸೌಟು

ಕೊಬ್ಬರಿಯನ್ನು ತೆಗೆದಾದ ಮೇಲೆ ಉಳಿಯುವ ಗೆರಟೆ ಅಥವಾ ತೆಂಗಿನ ಚಿಪ್ಪನ್ನು ಉರುವಲಿಗೆ ಬಳಸುವುದೇ ಜಾಸ್ತಿ. ಇದೇ ಗೆರಟೆಯನ್ನು ಕರಕುಶಲಕಲೆಗೂ ಬಳಸಲಾಗುತ್ತದೆ. ಚಿತ್ರದಲ್ಲಿ ಕಾಣುತ್ತಿರುವುದು ಶಂಕರ್ ಭಟ್ ಎಂಬುವರು ತಯಾರಿಸಿದ ಗೆರಟೆ ಸೌಟುಗಳು. ಇವು ಆಕರ್ಷಕ ಮತ್ತು ಪರಿಸರಸ್ನೇಹಿಯಾಗಿವೆ. ಗೆರಟೆ ಸೌಟುಗಳನ್ನು ಹಿಂದಿನ ಕಾಲದಲ್ಲಿ ಗ್ರಾಮೀಣ ಭಾಗದ ಜನರ ಮನೆಗಳಲ್ಲಿ ಕಾಣಬಹುದಾಗಿತ್ತು. ಆ ನಂತರದಲ್ಲಿ ಗೆರಟೆಯ ಸೌಟಿನ ಜಾಗಕ್ಕೆ ಹಿತ್ತಾಳೆ, ಅಲ್ಯೂಮಿನಿಯಂ ಹಾಗೂ ಸ್ಟೀಲ್ ಸೌಟುಗಳು ಬಂದವು. ಈಗ ಪುನಃ ಪರಿಸರಸ್ನೇಹಿ ಉತ್ಪನ್ನವಾಗಿ ಗೆರಟೆಯ ವಸ್ತುಗಳು ಕಾಣಿಸಿಕೊಳ್ಳುತ್ತಿವೆ. ತೆಂಗಿನ ಚಿಪ್ಪಿನ ಕರಕುಶಲ ಕಲೆಯು ಜನರ ಕೌಶಲಾಭಿವೃದ್ಧಿ ಮತ್ತು ಆರ್ಥಿಕ ಸಬಲೀಕರಣಕ್ಕೂ ದಾರಿಯಾಗಿದೆ. ಕೇವಲ ಉರುವಲಿಗೆ ಬಳಕೆಯಾಗುತ್ತಿದ್ದ ತೆಂಗಿನ ಗೆರಟೆಯು ಇಂದು ಆಲಂಕಾರಿಕ ಮತ್ತು ಗೃಹೋಪಯೋಗಿ ವಸ್ತುಗಳಾಗಿ ಮೌಲ್ಯವರ್ಧಿತವಾಗುತ್ತಿರುವುದು ಒಳ್ಳೆಯ ಬೆಳವಣಿಗೆ.

–ಜಿ.ಎಂ. ಬೊಮ್ನಳ್ಳಿ



## ಕಳೆಗುಂದದ ಅವಳಿ ದೇಗುಲ

ಕರ್ನಾಟಕದ ಮರ್ಲೆ ಗ್ರಾಮದಲ್ಲಿ ನೆಲೆಗೊಂಡಿರುವ ಅವಳಿ ಪ್ರಾಚೀನ ದೇವಾಲಯ ಚಿಕ್ಕಮಗಳೂರು ಮತ್ತು ಬೇಲೂರು ನಡುವೆ ನೆಲೆಗೊಂಡಿರುವ ಪ್ರಸಿದ್ಧ ಹೊಯ್ಸಳ ದೇವಾಲಯಗಳಲ್ಲಿ ಒಂದಾಗಿದೆ. ಅವಳಿ ಕೇಶವ ಮತ್ತು ಸಿದ್ದೇಶ್ವರ ಎಂದೇ ಪ್ರಸಿದ್ಧವಾಗಿರುವ ಎರಡೂ ದೇವಾಲಯಗಳು ಸೊಗಸಾದ ಹೊಯ್ಸಳ ವಾಸ್ತುಶಿಲ್ಪ ಶೈಲಿಯಲ್ಲಿ ಕೆತ್ತನೆ, ಶಿಲ್ಪಗಳನ್ನು ಹೊಂದಿದೆ. ಎರಡು ದೇವಾಲಯಗಳ ನಡುವೆ 12 ಅಡಿ ಎತ್ತರದ ಕಲ್ಲಿನ ಚಪ್ಪಡಿ ಇದೆ. ಅದರ ಮೇಲೆ ಅವುಗಳ ನಿರ್ಮಾಣದ ಇತಿಹಾಸದ ವಿವರಗಳನ್ನು ಕೆತ್ತಲಾಗಿದೆ. ವಿಷ್ಣುವರ್ಧನ ಕಾಲದಲ್ಲಿ ರಾಯನದಂಡನಾಥನು ಈ ಎರಡು ದೇವಾಲಯಗಳನ್ನು ನಿರ್ಮಿಸಿದ್ದು, ಅಕ್ಕಪಕ್ಕದಲ್ಲೇ ಇವೆ. ದೇಗುಲಗಳ ನಡುವೆ ಪೀಠದ ಮೇಲೆ ಇರಿಸಲಾಗಿರುವ ಎರಡು ಬೃಹತ್ ಕಲ್ಲಿನ ಶಾಸನಗಳು ಅವುಗಳ ನಿರ್ಮಾಣ ಮತ್ತು ಪವಿತ್ರೀಕರಣದ ವಿವರಗಳನ್ನು ಒಳಗೊಂಡಿವೆ. ಕೆಲವು ಕಂಬಗಳು ಸುಂದರವಾಗಿದ್ದು, ಗೋಡೆಗಳ ಕೆಲವು ಭಾಗಗಳು ಹಾನಿಗೊಳಗಾಗಿವೆ.

–ಚಾಂದಿನಿ ಆರ್., ಶಿವಮೊಗ್ಗ